ನ್ನಡ



**ಸರ್ಕಸ್ ಶುರು**
ಮಂಗಳೂರಿನಲ್ಲಿ ಶುಕ್ರವಾರ ಪ್ರಾರಂಭವಾದ ಗ್ರೇಟ್ ಬಾಂಬೆ ಸರ್ಕಸ್‌ನ ವಿವಿಧ ಆಟದ ಭಂಗಿ.



**ಉದ್ಘಾಟನೆ**
ಮಂಗಳೂರಿನ ಆಲೋಶಿಯಸ್ ಕಾಲೇಜಿನಲ್ಲಿ ಶನಿವಾರ ಎಂಎಸ್‌ಡಬ್ಲ್ಯೂ ದಶಮಾನೋತ್ಸವವನ್ನು ಉನ್ನತ ಶಿಕ್ಷಣ ಸಚಿವ ಡಾ.ವಿ.ಎಸ್. ಆಚಾರ್ಯ ಉದ್ಘಾಟಿಸಿ ಮಾತನಾಡಿದರು.

28 ಕ್ಷೇತ್ರದಲ್ಲಿ ಸಾಧನೆ ಮಾಡಿದ 84 ಮಂದಿ ಸಾಧಕರಿಗೆ ಇಂದು ಬೆಳಿಗ್ಗೆ 10ಕ್ಕೆ ಮಂಗಳೂರು ಪುರಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

# ರೋಟರಿ 'ಸೋಲಾರ್ ವಿಲೇಜ್' ಯೋಜನೆ ಜಾರಿ

## ಇದು ರಾಜ್ಯದಲ್ಲೇ ಪ್ರಥಮ ಪ್ರಯೋಗ । ತಾಲೂಕಿನ ಮೂರು ಗ್ರಾಮಗಳಿಗೆ ಸೋಲಾರ್ ದೀಪ ಅಳವಡಿಕೆ

**ಬೆಳ್ತಂಗಡಿ:** ಬೆಳ್ತಂಗಡಿ ರೋಟರಿ ಕ್ಲಬ್‌ನ ಜಿಲ್ಲಾ ಯೋಜನೆ ಸೌರಜ್ಯೋತಿ ಕಾರ್ಯಕ್ರಮದಡಿ ತಾಲೂಕಿನ ಮೂರು ಗ್ರಾಮಗಳಿಗೆ ಸೋಲಾರ್ ದೀಪಗಳನ್ನು ಅಳವಡಿಸಿ ಸೋಲಾರ್ ವಿಲೇಜ್ ಆಗಿ ಪರಿವರ್ತಿಸುವ ಕಾರ್ಯ ಕೈಗೆತ್ತಿಕೊಂಡಿದೆ. ಇದನ್ನು ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಜಾರಿಗೆ ತಂದಿದೆ ಎಂದು ರೋಟರಿ ಕ್ಲಬ್ ಬೆಳ್ತಂಗಡಿ ತಾಲೂಕು ಅಧ್ಯಕ್ಷ ಪ್ರತಾಪಸಿಂಹ ನಾಯಕ್ ಹೇಳಿದ್ದಾರೆ.

ಇತ್ತೀಚಿಗೆ ಸೋಮವಾರ ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ಯೋಜನೆಯ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

**ಏನಿದು ಯೋಜನೆ?:** ತಾಲೂಕಿನ ಅತಿ ದುರ್ಗಮವಾದ ಗ್ರಾಮಗಳ ಆರ್ಥಿಕವಾಗಿ ಹಿಂದುಳಿದ ಆಯ್ದ 150 ಕುಟುಂಬಗಳಿಗೆ ₹ 30 ಲಕ್ಷ ಮೌಲ್ಯದ ಯೋಜನೆಯನ್ನು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್‌ನ ಹಣಕಾಸಿನ ನೆರವು ಹಾಗೂ ರೋಟರಿ ಹಿತೈಷಿಗಳ ಸಹಕಾರದಿಂದ ಆಯೋಜಿಸಿದೆ. ತಾಲೂಕಿನ ನಿಡ್ಲೆ, ಶಿಶಿಲ ಹಾಗೂ ಕಳೆಂಜ ಗ್ರಾಮದ 150 ವಿದ್ಯುತ್ ಸಂಪರ್ಕವಿಲ್ಲದ ಮತ್ತು ಮುಂದಿನ 15 ವರ್ಷಗಳವರೆಗೆ ವಿದ್ಯುತ್ ಸಂಪರ್ಕ ಕಾಣಲು ಅಸಾಧ್ಯವಿರುವ ಮನೆಗಳಿಗೆ ಸೋಲಾರ್ ದೀಪಗಳ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ 60 ಮನೆಗಳಿಗೆ ಸೆಲ್ಕೋ ದೀಪಗಳನ್ನು ಅಳವಡಿಸಲಾಗಿದೆ ಎಂದರು.



ಪರಿಸರ ಕಾರ್ಯಕರ್ತ ಅಮೆರಿಕದ ಡೆನಿಸ್ ಸುದ್ದಿಗೋಷ್ಠಿಯಲ್ಲಿ ಪೂರಕ ಮಾಹಿತಿ ನೀಡಿದರು.

**ಜನಜಾಗೃತಿ ಕಾರ್ಯಕ್ರಮ:** ರೋಟರಿ ಸೆಲ್ಕೋ ಸೌರ ಜ್ಯೋತಿ ಯೋಜನೆಯ ಫಲಾನುಭವಿ ಕುಟುಂಬಗಳನ್ನು ರೋಟರಿ ಕ್ಲಬ್ ಬೆಳ್ತಂಗಡಿ ಹಾಗೂ ಸೆಲ್ಕೋ ಬೆಳ್ತಂಗಡಿ ಜಂಟಿಯಾಗಿ ಆಯ್ಕೆ ಮಾಡಿ ಯೋಜನೆಯ ಬಗ್ಗೆ ಜನಜಾಗೃತಿ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಆಯೋಜಿಸಲಾಗಿದೆ.

ಹೀಗೆ ಆಯ್ಕೆ ಮಾಡಿದ ಕುಟುಂಬಗಳಿಗೆ ಹಣಕಾಸಿದ ನೆರವನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್ ಹಾಗೂ ಸಿಂಡಿಕೇಟ್ ಬ್ಯಾಂಕ್‌ಗಳು ದೀರ್ಘ ಸಾಲದ ರೂಪದಲ್ಲಿ ಒದಗಿಸಲಿವೆ. ರೋಟರಿ ಕ್ಲಬ್ ಅಂಚಿನ ಹಣ ಕೊಡಮಾಡಿದೆ. ಈ ಫಲಾನುಭವಿಗಳಿಗೆ ಒಂದು ವರ್ಷದ ಉಚಿತ ಸೇವೆಯನ್ನು ಸೆಲ್ಕೋ ಒದಗಿಸಲಿದೆ ಎಂದು ನಾಯಕ್ ವಿವರಿಸಿದರು.

ಸೆಲ್ಕೋ ಸೋಲಾರ್ ಸಂಸ್ಥೆಯ ಮಾಲೀಕ ಡಾ.ಹರೀಶ್ ಹಂದೆ ಅವರು, ಬಡವರಿಗೆ ಬೆಳಕು ನೀಡುವ ಉದ್ದೇಶವೇ ಹೊರತು ದಂಧೆಯ ರೂಪದಲ್ಲಿ ನಾವು ಕಾರ್ಯ ಮಾಡುತ್ತಿಲ್ಲ. ಬಡವರ ಅವಶ್ಯಕತೆ ಗಮನಿಸಿ ರೋಟರಿಯೊಂದಿಗೆ ಈ ಯೋಜನೆ ಕೈಗೆತ್ತಿಕೊಂಡಿದ್ದೇವೆ ಎಂದರು.

ಪರಿಸರವಾದಿ ಕಾರ್ಯಕರ್ತ ಅಮೆರಿಕಾದ ಡೇನಿಸ್ ಹೇಜ್ ಅವರು ಇಂದು ಪ್ರಪಂಚದಲ್ಲಿ ಪರ್ಯಾಯ ಇಂಧನದ ಅಗತ್ಯವಿದೆ. ಸೌರ ಶಕ್ತಿಯ ಪೂರ್ಣ ಪ್ರಯೋಜನ ಪಡೆಯಬೇಕು ಎಂದರು.

ಎಸ್‌ಡಿಎಂ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಯಶೋವರ್ಮ, ರೋಟರಿ ಕಾರ್ಯದರ್ಶಿ ಜಯರಾಂ ಇದ್ದರು.

ಸೌರ ಜ್ಯೋತಿ ಯೋಜನೆಯ ನಿರ್ದೇಶಕ ನಾರಾಯಣ ಭಿಡೆ ವಂದಿಸಿದರು.